‘ಅವರು ಬಹುಶಃ ಸಂಬಂಧಪಟ್ಟವರ ಗಮನಕ್ಕೆ ತಂದಿರಬೇಕು. ಎಲ್ಲಾ ವಿಚಾರಗಳನ್ನೂ ಜಗಜ್ಜಾಹೀರು ಮಾಡುವುದು ಅವರ ಕೆಲಸವಲ್ಲವಲ್ಲ?’

‘ರೇವಾ... ಶೋರ್... ಬಬಲ್... ಯಾವ ಹೆಸರಾದರೂ ಅವರ ಲಿಂಗವನ್ನು ಸೂಚಿಸುವಂತಿವೆಯೇ?’

‘ದೇಹದಲ್ಲಿ ಅರ್ಧಭಾಗ ಕೃತಕ ವ್ಯವಸ್ಥೆಯಾಗಿರುವುದರಿಂದ ಲಿಂಗವನ್ನು ಕಟ್ಟಿಕೊಂಡು ತಮಗೇನಾಗಬೇಕಿದೆ ಎಂಬ ಇರಾದೆ ಅವರದು’ ತಂಡದಲ್ಲಿದ್ದವರೊಬ್ಬರು ತಿಳಿದವರಂತೆ ನುಡಿದರು.

‘ಈಗ ಅವರು ಸ್ವಾಗತಕಾರಿಣಿಯ ಬಳಿ ಒಬ್ಬೊಬ್ಬರೇ ನೋಂದಾಯಿಸಿದ ಬಳಿಕ ಮೊದಲು ಅವರು ಮನಃಶಾಸ್ತ್ರಜ್ಞರ ಸೆಷನ್ ಅಟೆಂಡ್ ಮಾಡಲಿ. ನಂತರ ವೈದ್ಯರ ತಂಡ ಅವರ ದೇಹಸ್ಥಿತಿಯ ರೆಕಾರ್ಡ್ಸ್ ಪರಿಶೀಲಿಸಿ ಯಾವ ತರಬೇತಿ ಅವರಿಗೆ ಸರಿಹೊಂದುತ್ತದೆ ಎಂಬ ಶಿಫಾರಸ್ಸಿನೊಂದಿಗೆ ಅವರ ತರಬೇತಿ ಶುರು ಮಾಡೋಣ’ ಅವಿರತ್ ಹೇಳಿದಾಗ ಅಲ್ಲಿದ್ದವರು ಸಮ್ಮತಿ ನೀಡಿ ಕಾರ್ಯಗತರಾಗಿದ್ದರು.

ಒಂದು ಕೊಠಡಿಯಲ್ಲಿದ್ದ ಆಸನಗಳಲ್ಲಿ ಒಬ್ಬೊಬ್ಬರೇ ಪಡೆಯ ಸದಸ್ಯರು ಆಗಮಿಸಿ ಕುಳಿತುಕೊಳ್ಳತೊಡಗುತ್ತಿದ್ದಂತೆಯೇ ಮನಃಶಾಸ್ತ್ರಜ್ಞರು ರೊಬೋಗಳ ವಿಚಾರವನ್ನು ಸಾವಧಾನವಾಗಿ ಪ್ರಸ್ತಾಪಿಸಿದ್ದರು.

ಪ್ರಾರಂಭದಲ್ಲಿ ತಮಗೇಕೆ ಈ ರೊಬೋ ತರಬೇತಿ ಎಂದು ಗೊಣಗಾಡಿದ ಕೆಲವರು ನಂತರ ನಿಧಾನವಾಗಿ ಮನಃಶಾಸ್ತ್ರಜ್ಞರ ಸಮ್ಮೋಹಕ ನುಡಿಗೆ ಮಾರುಹೋಗಿ, ಅವರ ವಶವಾದಂತೆ ತಮ್ಮ ಮೆದುಳಿನಲ್ಲಿ ಈಗಾಗಲೇ ಜೇಡರಬಲೆಯಂತೆ ಹೆಣೆದಿದ್ದ ಪೂರ್ವಭಾವಿ ಪರಿಕಲ್ಪನೆಗಳನ್ನು ತೊಡೆದುಹಾಕತೊಡಗಿದ್ದರು. ತಾವು ವಾಸ್ತವವೆಂದು ಪರಿಗಣಿಸಿದ್ದು ನಿಜಸ್ಥಿತಿಯಾಗಿರದೆ ಅದರ ಹಿಂದಿನ ಉದ್ದೇಶ, ಕಾರ್ಯವೈಖರಿಗೆ ಒಂದು ಅರ್ಥವಿದ್ದುದು ನಿಧಾನವಾಗಿ ಮನವರಿಕೆಯಾಗತೊಡಗಿತ್ತು. ತಾವಿದ್ದ ಸ್ಥಿತಿಗೂ ಲೋಕವನ್ನು ಪರಿಭಾವಿಸುವ ರೀತಿಗೂ ಇದ್ದ ಅವಿನಾಭಾವ ಸಂಬಂಧವೇ ಕಳಚುವಂತಹ ಸ್ಥಿತಿ ಅವರ ಎದುರಿಗಿತ್ತು. ಈಗ ಪ್ರಸ್ತುತಪಡಿಸಿದ ಲೋಕ ತಾವು ಪರಿಭಾವಿಸಿದ ಲೋಕವಲ್ಲದಿದ್ದರೂ ಅದನ್ನು ಸ್ವೀಕರಿಸುವ ಮನಸ್ಥಿತಿಗೆ ಅಂದು ತಲುಪಿದ್ದುದೇ ವಿಶೇಷವಾಗಿತ್ತು.

ರೊಬೋಗಳೂ ತಮಗೆ ಸಹಾಯಕರಾಗಿ ಹಲವಾರು ಕೆಲಸಗಳನ್ನು ನೈಪುಣ್ಯತೆಯಿಂದ ಕಾರ್ಯ ನಿರ್ವಹಿಸುತ್ತಿದ್ದುದರಿಂದ ಅವರೊಂದಿಗಿನ ಸಹಬಾಳ್ವೆಯನ್ನು ಈ ಸೆಷನ್ ಮನಗಾಣಿಸುವಲ್ಲಿ ಯಶಸ್ವಿಯಾಗಿದ್ದುದು ಪಡೆಯ ಸದಸ್ಯರು ನಸುನಗು ಬೀರುತ್ತಾ ಹೊರಬಂದುದೇ ಸಾಕ್ಷಿಯಾಗಿತ್ತು.

ಈ ಪರಿವರ್ತನೆಯ ನಿರೀಕ್ಷೆಯಲ್ಲಿದ್ದ ತಂಡದ ಇತರ ಸದಸ್ಯರು ಸಮಾಧಾನದ ಉಸಿರು ಬಿಡುತ್ತಿದ್ದಂತೆಯೇ ಅವಿರತ್ ಈ ವಿಷಯವಾಗಿ ನಿಯಂತ್ರಣ ಕೊಠಡಿಗೆ ಮಾಹಿತಿ ರವಾನಿಸಿದ್ದ.

ವೈದ್ಯರ ತಂಡವೊಂದು ಪ್ರತ್ಯೇಕ ಕೊಠಡಿಯಲ್ಲಿ ಪರೀಕ್ಷೆಗೆ ಸಜ್ಜಾಗಿದ್ದು, ಪಡೆಯ ಸದಸ್ಯರು ಹೊರ ಬರುತ್ತಿದ್ದಂತೆಯೇ ಯುವತಿಯಂತೆ ಕಾಣುವ ರೊಬೋ ಅವರನ್ನು ವೈದ್ಯರ ಬಳಿ ಕರೆದೊಯ್ದಿತ್ತು. ಅಲ್ಲೂ ಸಹ ಅಂಗಾಂಗಗಳ ಬದಲಿ ವ್ಯವಸ್ಥೆಯ ಪಟ್ಟಿ ಸಿದ್ಧಗೊಂಡು ಪಡೆಯ ಸದಸ್ಯರ ಹಾಲಿ ದೇಹಸ್ಥಿತಿಯ ಪರೀಕ್ಷೆಗೆ ಬಿಂಬಗಳನ್ನು ಹಾಯಿಸಲಾಗಿತ್ತು. ಒಳ ಅಂಗಾಂಗಗಳ ವಿವರಗಳನ್ನು 3 ಡಿ ಅಡಿ ನಮೂದಾಗುತ್ತಿದ್ದಂತೆಯೇ ಅವರಿಗೆ ಸೂಕ್ತ ತರಬೇತಿಯ ವಿವರಗಳೂ ಜೊತೆಗೆ ಮೂಡಿಬಂದಿದ್ದವು.

ತಂಡದ ನಾಯಕ ರೇವಾ ತಾನು ತರಬೇತಿಗೆ ಆಯ್ಕೆಯಾಗಿರುವ ವಿಷಯ ಪ್ರಕಟಗೊಳ್ಳುತ್ತಿದ್ದಂತೆಯೇ ಹರ್ಷೋದ್ಗಾರದಿಂದ ನುಡಿದಿದ್ದ, ‘ನಮಗೀಗ ಸುವರ್ಣ ದಿನಗಳು ಎದುರಾಗಿವೆ!’

‘ಈ ಸುವರ್ಣ ದಿನಗಳೇ ನಮಗಾದ ಘೋರ ಅಪಘಾತವನ್ನು ನೆನಪಿಸುತ್ತಿದೆಯೆಲ್ಲ ಲೀಡರ್’ ಎಂದು ಅವರಲ್ಲೊಬ್ಬ ರಾಗವೆಳೆದಿದ್ದ.

‘ನನಗೆ ಚಲನೆಯನ್ನು ಕಂಡರೆ ಆತಂಕ ಎದುರಾಗುತ್ತದೆ’. ಒಬ್ಬೊಬ್ಬರೇ ಫಲಿತಾಂಶಕ್ಕಾಗಿ ಎದುರು ನೋಡುತ್ತಾ ತಮ್ಮ ಭಯವನ್ನು ವ್ಯಕ್ತಪಡಿಸತೊಡಗಿದ್ದರು.

‘ಇಲ್ಲಿರುವ ವೈದ್ಯರು ತಂತ್ರಜ್ಞರು ಅದಕ್ಕೂ ಪರಿಹಾರ ಕಂಡು ಹಿಡಿದಿರುತ್ತಾರೆ. ನಾವೇನು ಹೊಸ ಚಾಲಕರಲ್ಲವಲ್ಲ. ನಮಗೆ ಚಾಲನೆ ಮಾಡುವುದು ತಿಳಿದಿದೆ. ಆದರೆ, ಯಾವುದೋ ಕೆಟ್ಟ ಘಳಿಗೆಯಲ್ಲಿ ನಮ್ಮ ತಪ್ಪಿಂದಲೋ ಅಥವಾ ಬೇರಾರದೋ ತಪ್ಪಿಂದಲೋ ಅಪಘಾತಗಳಾಗಿವೆಯಷ್ಟೆ’ ಎಂದು ರೇವಾ ಸಮಾಧಾನದ ನುಡಿಯಾಡಿದ್ದ. ಆದರೂ ಆತಂಕವನ್ನು ಮಾತಿನಲ್ಲೇ ಹೊರಹಾಕುವಲ್ಲಿ ಅವರಲ್ಲೇ ಸ್ಪರ್ಧೆ ಏರ್ಪಟ್ಟಿದ್ದಂತಿತ್ತು.

‘ನಾನು ನನ್ನ ಕುಟುಂಬದವರನ್ನು ಇಲ್ಲಿಗೆ ಕರೆಸೋಣವೆಂದಿದ್ದೆ, ನನಗೆ ನೈತಿಕ ಸ್ಥೈರ್ಯ ಸಿಗುತ್ತಿತ್ತು.’

‘ಇಲ್ಲಿ ನಡೆಸುವ ಪರೀಕ್ಷೆಗಳಿಗೆ ಅವರುಗಳು ಸಾಕ್ಷಿಗಳಾಗುವುದೇ? ಕರೆದುಕೊಂಡು ಬರದಿದ್ದುದು ಒಳ್ಳೆಯದಾಯಿತು.’

‘ನನಗೆ ಅಪಘಾತವಾದ ಬಳಿಕ ನನ್ನ ಮಿಸೆಸ್ ಓಡಿಸುವ ವಾಹನದಲ್ಲಿ ಕುಳಿತುಕೊಳ್ಳುವುದಷ್ಟೇ ಆಯಿತು. ಇಲ್ಲದಿದ್ದರೆ, ಸಾರ್ವಜನಿಕ ಸಾರಿಗೆ ಬಳಸ್ತಿದ್ದೀನಿ. ಈಗ ಮತ್ತೆ ಈ ಚಾಲನೆಯ ಉಸಾಬರಿ ನಮಗೆ ಬಂದಿದೆ!’

‘ಆದರೆ ನಾವು ಚಾಲಕರಾಗಲಿಕ್ಕೆ ಈ ತರಬೇತಿ ನೀಡ್ತಿಲ್ಲವಲ್ಲ. ನಮ್ಮ ಸಂಚಾರದ ಜ್ಞಾನ ಹಾಗೂ ತಿಳಿವಳಿಕೆಯನ್ನು ದೈಹಿಕ ಹಾಗೂ ಮಾನಸಿಕ ಸಮತೋಲನ ನೋಡುತ್ತಾ ಪರೀಕ್ಷೆಗೆ ಒಡ್ಡುತ್ತಾರೆ.’

‘ಪರೀಕ್ಷೆ ಎಂದ ಕೂಡಲೇ ನನ್ನ ಮಗ ತನ್ನ ಎಲ್ಲಾ ಆಟಿಕೆ ಬದಿಗೊತ್ತಿ ಕಂಪ್ಯೂಟರ್‌ನೆಡೆ ನೋಟ ನೆಟ್ಟು ಓದುವ ಗಳಿಗೆಗಳನ್ನು ನೆನಪಿಸುತ್ತವೆ.’

‘ಆದರೆ ನಮ್ಮ ಪರೀಕ್ಷೆ ವರ್ಚ್ಯುಯಲ್ ವಾಲ್‌ನಲ್ಲಿ ನಡೆಯಲಿದೆಯಂತೆ... ಕಂಪ್ಯೂಟರ್ ಕಟ್ಟಿಕೊಂಡು ಏನಾಗಬೇಕಿದೆ.’

ತರಬೇತಿಗೆ ಆಯ್ಕೆಯಾದವರ ಒಬ್ಬೊಬ್ಬರೇ ಹೆಸರನ್ನು ನಿರೀಕ್ಷಣಾ ಕೊಠಡಿಯಲ್ಲಿ ಪ್ರಕಟಿಸುತ್ತಿದ್ದಂತೆಯೇ ಹರ್ಷೋದ್ಗಾರದಿಂದ ತಮಗೆ ಸೂಚಿಸಲಾದ ತರಬೇತಿ ಹಾಲ್‌ಗೆ ನಡೆದಿದ್ದರು. ಅವರಿಗೆ ಈಗಾಗಲೇ ಯಾರಿಂದಲೋ ಮಾಹಿತಿ ತಿಳಿದಿರುವಂತೆ ಉಪಕರಣವನ್ನು ತಮ್ಮ ತಲೆಗೆ ಧರಿಸುತ್ತಿದ್ದಂತೆಯೇ ಅವರ ಎದುರಿಗಿನ ಪರದೆಯನ್ನು ವರ್ಚ್ಯುಯಲ್ ವಾಲ್‌ನಲ್ಲಿ ರಸ್ತೆಯನ್ನಾಗಿ ಪರಿವರ್ತಿಸಿ ವಾಹನವನ್ನು ಚಲಾಯಿಸುವ ಭ್ರಮಾಲೋಕಕ್ಕೆ ಕರೆದೊಯ್ದಿತ್ತು.

ಯಾಕೋ ಪಡೆಯ ನಾಯಕ ರೇವಾನಿಗೆ ತನ್ನ ಹಿಂದಿನ ಘೋರ ಅಪಘಾತದ ನೆನಪು ಮರುಕಳಿಸುತ್ತಿದ್ದಂತೆಯೇ ಬದಿಯಲ್ಲಿದ್ದ ತರಬೇತುದಾರರು ವಾಹನವನ್ನು ಶುರು ಮಾಡಲು ತಿಳಿಸಿದ್ದರು. ಅವರೊಂದಿಗಿದ್ದ ಮನೋವೈದ್ಯ ತಜ್ಞರು ಅವನ ದೇಹದಲ್ಲಾಗುತ್ತಿದ್ದ ಏರಿಳಿತಗಳು ತಮ್ಮ ಕಂಪ್ಯೂಟರ್‌ನಲ್ಲಿ ಮೂಡುತ್ತಿದ್ದಂತೆಯೇ ಅಭಿಪ್ರಾಯವನ್ನು ನಮೂದಿಸತೊಡಗಿದ್ದರು.

‘ನೀವು ಆರಾಮಾಗಿರುವಿರಿ ತಾನೇ, ಇಲ್ಲಾ ಕೊಂಚ ಸುಧಾರಿಸಿಕೊಂಡು ಚಾಲನೆ ಶುರು ಮಾಡುವಿರಾ?’

ತರಬೇತುದಾರರು ಅವನ ಮುಖದಲ್ಲಿ ಮೂಡಿದ ಆತಂಕದ ಛಾಯೆಯನ್ನು ಗಮನಿಸುತ್ತಾ ಕೇಳಿದರು.

‘ಎನರ್ಜಟಿಕ್ ಡ್ರಿಂಕ್ ಒಂದು ಸಿಪ್ ಸೇವಿಸಿದರೆ ಹುಮ್ಮಸ್ಸು ಬರುತ್ತದೆ’ ಎಂದು ಶುಷ್ಕ ನಗೆ ನಕ್ಕ ರೇವಾ. ಆದರೆ ಮೇಲೆ ತೋರ್ಪಡಿಸಿದಂತೆ ಒಂದು ಸಿಪ್‌ನಿಂದ ಅವನಲ್ಲಿ ಅಗಾಧ ಬದಲಾವಣೆ ತರದೆಂದು ತರಬೇತುದಾರರು ಹಾಗೂ ಮನೋವೈದ್ಯರಿಗೆ ತಿಳಿದಿತ್ತು. ಆದರೂ ಸಮೀಪದ ಸಹಾಯಕ ರೊಬೋಗೆ ರೇವಾನ ಇಚ್ಛೆಯ ಪಾನೀಯ ತರಲು ಆಜ್ಞೆ ಇತ್ತರು. ಅದನ್ನು ಒಂದೇ ಗುಟುಕಿಗೆ ಕುಡಿದರೂ ರೇವಾ ತನ್ನ ಆತಂಕವನ್ನು ಹೊಡೆದೋಡಿಸಲು ವಿಫಲನಾಗಿದ್ದ. ಇನ್ನು ತಾನು ಸುಮ್ಮನಿರುವುದು ತರವಲ್ಲವೆಂದು ಮನಗಂಡ ಮನೋವೈದ್ಯ ತನ್ನ ಸೂಚನೆಗಳನ್ನು ಪಾಲಿಸುವಂತೆ ಹೇಳಿದರು.

ಅವರ ಒಂದೊಂದೇ ಸೂಚನೆಗಳನ್ನು ಗಮನವಿಟ್ಟು ಕೇಳತೊಡಗಿದ ರೇವಾನಿಗೆ ನಿಧಾನವಾಗಿ ತನ್ನ ಹಳೆಯ ಕಹಿ ನೆನಪುಗಳು ಮರುಕಳಿಸಿ ತನ್ನ ಚಾಲನೆಗೆ ತೊಂದರೆ

## ತಿವಿಮಾತು

ಚುನಾವಣೆ ವೇಳೆ ಇಲ್ಲ
ಸವಿಮಾತು,
ಇಲ್ಲ ಕವಿಮಾತು
ಕಿವಿಮಾತು.
ಕೇಳಿಬರುವುದು ಬರೀ
ತಿವಿಮಾತು!

■ ಕಾಸರಗೋಡು ಅಶೋಕ್ ಕುಮಾರ್